ಓಃಎಸ್ಃನಂ.*250/2015*

ಪಿ.ಡಬ್ಲ್ಯೂ- *1*

<u>ದಿಃ *01-10-2021* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಹೆಚ್ ವಿ ಎಂ ವಕೀಲರಿಂದ</u>

ನನ್ನ ಮದುವೆ *1994-95* ರಲ್ಲಿ ಆಗಿರುತ್ತದೆ. ನನಗೆ ಮಗನಿದ್ದು ಅವನು *2000* ದ ಇಸವಿಯಲ್ಲಿ ಹುಟ್ಟಿದ್ದು, ಅವನಿಗೆ ಈಗ *21* ವರ್ಷ ವಯಸ್ಸಾಗಿರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿನ ಅಂಶಗಳು ಗೊತ್ತಿರುತ್ತದೆ. ನಾನು ನೀಡಿದ ಮಾಹಿತಿಯಂತೆ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ನಾನು ನನ್ನ ಹೆಂಡತಿ ಹೆಸರನ್ನು ಪಡಿತರ ಚೀಟಿಯಲ್ಲಿ ಸೇರಿಸಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ನೀಡಿದ ಅರ್ಜಿಯ ಮೇರೆಗೆ ನನ್ನ ಪೋಟೋ ಮತ್ತು ಸಹಿಯನ್ನು ತಹಶೀಲ್ದಾರ್ ರವರು ದೃಢೀಕರಿಸಿರುತ್ತಾರೆಂದರೆ ಸರಿಯಲ್ಲ. ಮತದಾರರ ಪಟ್ಟಿಯಲ್ಲಿ ನನ್ನ ಅಜ್ಜನ ಹೆಸರು ಸಿದ್ರಾಮಪ್ಪ ಎಂದು ಇದೆ ಎಂದರೆ ಸಾಕ್ಷಿಯು ನನ್ನ ಅಜ್ಜನ ಹೆಸರು ಸಿದ್ರಾಮಪ್ಪ ಎಂದು ನುಡಿಯುತ್ತಾರೆ. ಹೆಬ್ಬೆ ಗ್ರಾಮದಲ್ಲಿನ ಭದ್ರಮ್ಮನವರ ಮನೆಯ ಸಂಖ್ಯೆ *28* ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಭದ್ರಮ್ಮ ತೀರಿದ ನಂತರ ಅವರ ಮಗ ನಾನು ಎಂದು ಮನೆ ಸಂಖ್ಯೆ *28* ರಲ್ಲಿ ನನ್ನ ಹೆಸರನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಂ ಸಿ ಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಎಂದೂ ಸಹ ಎಂ ಸಿ ಹಳ್ಳಿ ಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ.

ನಾನು ಶಿವಮೊಗ್ಗದಲ್ಲಿ ವಾಸವಿರುತ್ತೇನೆ ಎಂದರೆ ಸಾಕ್ಷಿಯು ಹೋಗಿ ಬಂದು ಮಾಡುತ್ತಿದ್ದು, ಅಲ್ಲಿ ಪಡಿತರ ಚೀಟಿ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ಪಡಿತರ ಚೀಟಿ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಶಿವಮೊಗ್ಗದಲ್ಲಿ ಮತದಾರರ ಚೀಟಿ ಹೊಂದಿರುತ್ತೇನೆ ಎಂದರೆ ಸರಿ ಭದ್ರಮ್ಮನ ಮಕ್ಕಳಾದ ಸಿದ್ದಪ್ಪ ಮತ್ತು ಗಂಗಪ್ಪನವರು ಹೆಬ್ಬೆ ಗ್ರಾಮದಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಸದರಿ ಮನೆಯನ್ನು ಭದ್ರಾ ಅಭಯಾರಣ್ಯ ಯೋಜನೆಯಡಿಯಲ್ಲಿ ವಶಪಡಿಸಿಕೊಂಡಿದ್ದಕ್ಕಾಗಿ ಎಂ ಸಿ ಹಳ್ಳಿಯಲ್ಲಿ ಅವರಿಗೆ ಮನೆ ನೀಡಿದ್ದಾರೆಂದರೆ ಸರಿ. ಭದ್ರಮ್ಮನ ಮಗಳಾದ ದೇವಮ್ಮನವರ ಮನೆ ವಶಪಡಿಸಿಕೊಂಡಿದ್ದಕ್ಕಾಗಿ ಅವರಿಗೂ ಸಹ ಮನೆ ನೀಡಿದ್ದಾರೆಂದರೆ ಸರಿ. ದೇವಮ್ಮನ ಮಗ ಶಂಕರಯ್ಯನವರಿಗೂ ಸಹ ಮನೆ ನೀಡಿದ್ದಾರೆಂದರೆ ಸರಿ. ಸಿದ್ದಪ್ಪನ ಮಗಳಾದ ರತ್ನಮ್ಮಳಿಗೂ ಸಹ ಮನೆ ನೀಡಿದ್ದಾರೆಂದರೆ ಸರಿ. ಭದ್ರಮ್ಮನ ಮನೆ ಮತ್ತು ಮರ ಗಿಡಗಳನ್ನು ವಶಪಡಿಸಿಕೊಂಡಿದ್ದಕ್ಕಾಗಿ ಬಂದ ಪರಿಹಾರದ ಹಣ *65* ಸಾವಿರಗಳನ್ನು ನಾನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮೋಸ ಮಾಡಲೆಂದು ಎಂ ಸಿ ಹಳ್ಳಿಯಲ್ಲಿ ಅವರು ವಾಸವಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವ ಸ್ವತ್ತಿನ *15* ಗುಂಟೆಯಲ್ಲಿ ಉಳುಮೆ ಮಾಡುತ್ತಿದ್ದು, ಉಳಿದ ಜಮೀನಿನಲ್ಲಿ ನಾನು ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪಡಿತರ ನೊಂದಣಿ ಪುಸ್ತಕದಲ್ಲಿರುವ ನನ್ನ ಸಹಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ನನ್ನ ತಕರಾರು ಇಲ್ಲ ಎಂದರೆ ಸರಿ. ದಿಃ *21-07-2014* ರಂದು

ನಾನು ಪಂಚಾಯಿತಿದಾರರ ಸಮಕ್ಷಮ ಪ್ರತಿವಾದಿಗೆ *15* ಗುಂಟೆ ಜಮೀನನ್ನು ಬಿಟ್ಟುಕೊಟ್ಟು ಅದರ ಬಾಬ್ತು ಒಂದು ಲಕ್ಷ ರೂಪಾಯಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ತೊಂದರೆ ಕೊಟ್ಟಿದ್ದಕ್ಕಾಗಿ ಪ್ರತಿವಾದಿಯು ನನ್ನ ವಿರುದ್ದ ಪೊಲೀಸ್ ದೂರು ನೀಡಿದ್ದಾರೆಂದರೆ ಸರಿಯಲ್ಲ. ನಾನು ದಾವ ಸಲ್ಲಿಸುವವರೆಗೂ ಪ್ರತಿವಾದಿಯೆ ದಾವ ಸ್ವತ್ತಿನ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಭದ್ರಮ್ಮನ ಆಸ್ತಿಯನ್ನು ಲಪಾಟಯಿಸಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***